ಬದಲಾಯಿಸಿ ನುಗ್ಗಿಯಲ್ಲಿ ರಜಾ ಕೊಡಬೇಕೆಂಬುದನ್ನು ನಿಗದಿಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—Circular ನಲ್ಲಿ ನಿಗದಿ ಮಾಡಿದ್ದಾರೆ. ಬೇಸಿಗೆ ರಜ ಈ ವರುಷ ಇಲ್ಲ. ಈ ಹೊಸ ಸುಧಾರಣೆಯ ಪ್ರಕಾರ ವಿದ್ಯಾರ್ಥಿಗಳಿಗೆ 10ನೇ ತಾರೀಖಿನಿಂದ 30ನೇ ತಾರೀಖು ಜನವರಿ ವರೆಗೂ, ದಸರಾ ರಜ 14 ದಿವಸಗಳೂ, ಮತ್ತು 23ನೇ ಡಿಸೆಂಬರ್‌ನಿಂದ ಹಿಡಿದು 30ನೇ ಜನವರಿವರೆಗೂ general holidays ಇವೆ.

ಶ್ರೀ ಪಿ. ಆರ್. ರಾಮಯ್ಯ.—ನುಗ್ಗಿ ಕಾಲವನ್ನು ಗಮನದಲ್ಲಿ ಇಟ್ಟುಕೊಂಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ನುಗ್ಗಿ ಕಾಲ ಒಂದೊಂದು ಕಡೆ ಒಂದೊಂದು ರೀತಿ ಇದೆ ಎಂಬುದು ಗೊತ್ತಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಗಮನದಲ್ಲಿಟ್ಟುಕೊಂಡು ಸ್ವಲ್ಪ ಹೆಚ್ಚು ಕಡಿಮೆ ಬದಲಾವಣೆ ಮಾಡುವುದಕ್ಕೆ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರಿಗೆ authority ಕೊಟ್ಟಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಒಂದೊಂದು ಪ್ರದೇಶದಲ್ಲಿ ಒಂದೊಂದು ನುಗ್ಗಿಕಾಲವಿದೆ ಎಂಬುದು ಗೊತ್ತಾಗಿದೆಯೇ ?

ಶ್ರೀ ಎ. ಜಿ. ರಾಮಚಂದ ರಾವ್.—ವ್ಯತ್ಯಾಸವಿದೆ. ಅದನ್ನು ಸಮನ್ವಯ ಮಾಡಬೇಕಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಒಂದೊಂದು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್‌ರವರ unit ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ನುಗ್ಗಿಕಾಲವಿರುವುದರಿಂದ ಅದನ್ನು ಹೇಗೆ ಕಂಡುಹಿಡಿಯುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—Average ಕಂಡುಹಿಡಿಯುವ ಹಾಗೆ ಮಾಡಿ ಆಯಾ ಡಿಸ್ಟ್ರಿಕ್ಟಿನ ಪರಿಸ್ಥಿತಿಯಲ್ಲಿ ನುಗ್ಗಿ ಕಾಲದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ರಜಾ ದಿನಗಳನ್ನು ಸಮನ್ವಯ ಮಾಡುವುದು ಅನಿವಾರ್ಯ.

ಶ್ರೀ ಕೆ. ಪುಟ್ಟಸ್ವಾಮಿ —ರಜಾ ದಿನಗಳು ಬದಲಾವಣೆಯಾಯಿತೆಂಬುದಲ್ಲದೆ ಇನ್ನೇನಾದರೂ ಬದಲಾವಣೆಯಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Working days ನಲ್ಲಿ ಬದಲಾವಣೆಯಾಗಿದೆ, ಹಾಗೆಯೇ ಇನ್ನೂ ಅನೇಕ ಬದಲಾವಣೆಗಳಾಗಿವೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದಲ್ಲದೆ ಇನ್ನೇನಾದರೂ ಬದಲಾವಣೆಯಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—It is a very vague question; ಒಂದು ಹೇಳಬೇಕಾದರೆ, Training of Teachers ಕಾರ್ಯ ನಡೆದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇವೆಲ್ಲಾ ಅಲ್ಲದೆ ಸರ್ಕಾರದ ದೃಷ್ಟಿಯಲ್ಲಿ ಬಹು ಮುಖ್ಯವಾದದ್ದೆನ್ನುವ ಬದಲಾವಣೆಯಾವುದಾದರೂ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆ. Training of teachers, change of Syllabus, inclusion of Social Subjects and Manual labour—ಇವೆಲ್ಲಾ ಆಗಿವೆ.

ಶ್ರೀ ಕೆ. ಪುಟ್ಟಸ್ವಾಮಿ.—ಇವೆಲ್ಲಾ ಬದಲಾವಣೆಯಾಗಿದೆಯೆಂದು ಸರ್ಕ್ಯುಲರ್ ಹೊರಟಿವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೊರಟಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ತಾರೀಖಿನಲ್ಲಿ ಹೊರಟಿದೆಯೆಂಬುದನ್ನು ಹೇಳುತ್ತೀರಾ ?

(*No answer*)

Mr. SPEAKER.—You have taken more than ten minutes. Next Question.

---

## Employment Exchange.

*Q.*—65. Sri S. SRINIVASA IYENGAR (T-Narasipur).—

Will the Government be pleased to state :—

(*a*) when the Employment Exchange was established in Mysore State;

(*b*) the total amount of money spent on establishment and other charges each year from the date of establishment till to date;

(*c*) the number of applications for appointments received each year from the date of establishment;

(*d*) the number of applicants to whom the Exchange was able to secure appointments from the date of establishment (yearwar figures may kindly be given) ?

*A.*—Sri A. G. RAMACHANDRA RAO (Minister for Law and Education).—

(*a*) In the year 1945.

(*b*) The establishment was under the State Labour Department till the time of integration with the Centre in 1950.

Details of yearwar expenditure on establishment and other charges from 1950-51 are furnished below :—

| | | Rs. |
|---|---|---|
| 1950-51 | ... | 30,600 (in round |
| 1951-52 | ... | 36,100 figures). |
| 1952-53 | ... | 38,900 |
| 1953-54 | ... | 42,300 |

60 per cent of this expenditure is borne by the Central Government and

(SRI A. G. RAMACHANDRA RAO.)

40 per cent by the State Government.

(*c*) and (*d*)

| *Year* | *No. of candidates registered* | *No. of applicants placed in employment* |
|---|---|---|
| | Rs. | Rs. |
| 1946 ... | 1,089 | 146 |
| 1947 ... | 1,293 | 396 |
| 1948 ... | 5,246 | 566 |
| 1949 ... | 12,779 | 789 |
| 1950 ... | 18,770 | 663 |
| 1951 ... | 14,640 | 1,609 |
| 1952 ... | 18,694 | 990 |
| 1953 ... | 22,250 | 1,259 |
| 1954 ... | 20,181 | 850 |
| 1955 ... | 1,675 | 103 |

January only

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮೈಸೂರು ಸರ್ಕಾರದಲ್ಲಿ ಖಾಲಿಯಿರತಕ್ಕ ಕೆಲಸಗಳಿಗೂ ಸಹ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮುಖಾಂತರವೇ ನಾವಧರೂ ನೇಮಕ ಮಾಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.— ಇಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮೈಸೂರು ನಂಸ್ಥಾನದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಮಾಡುವ ಕೆಲಸಕ್ಕೂ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರು ಮಾಡುತ್ತಿರುವ ಕೆಲಸಕ್ಕೂ ಒಂದಕ್ಕೊಂದಕ್ಕೆ overlap ಆಗುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.— overlap ಆಗುತ್ತಿಲ್ಲ: They have got different functions and they are different insititutions.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಪಿ. ಎಸ್. ಸಿ. ಯವರು ಮಾಡುವ ಕೆಲಸವನ್ನೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಪಹಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಸಾಧ್ಯವಿಲ್ಲವೆಂದು ಸರ್ಕಾರದವರ ಅಭಿಪ್ರಾಯ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದು ವರ್ಷಕ್ಕೆ 20 000 ಅರ್ಜಿಗಳು ಬಂದು ಕೇವಲ 700-800ಕ್ಕೆ ಕೆಲಸ ದೊರೆಯುತ್ತಿರುವುದರಿಂದ ಇದರಿಂದ ಅಷ್ಟು ಉಪಯೋಗವಾಗುತ್ತಿಲ್ಲವೆಂದು ಹೇಳಬಹುದಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.— 20,000 ಅರ್ಜಿಗಳು ಬಂದು 700 ಜನರಿಗೆ ಕೆಲಸ ಒದಗಿಸಿದೆಯೆಂದು ಹೇಳಿದ ಮಾತ್ರಕ್ಕೇ ಬಾಕಿಯವರಿಗೆ ಕೆಲಸ ಸಿಕ್ಕಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅನೇಕರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೂ ಹಾಕುತ್ತಾರೆ, ಅತ್ತ ಪಿ. ಎಸ್. ಸಿ.ಗೂ ಹಾಕುತ್ತಾರೆ. ಇವರ ಮುಖಾಂತರ ಸಿಕ್ಕಿರುವುದು ಇಷ್ಟು ಎಂದು ಮಾತ್ರ ಇದರಿಂದ ಅರ್ಥವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇವರು ಕೆಲಸದ ಅರ್ಜಿಗಳನ್ನು ಆಯಾ ಇಲಾಖೆಗಳಿಗೆ ಕಳುಹಿಸುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರಿ ಡಿಪಾರ್ಟ್‌ಮೆಂಟಿಗೆ ಕಳುಹಿಸುವುದಿಲ್ಲ; ಆಯಾ industrial concernsಗಳಿಗೆ ಕಳುಹಿಸುತ್ತಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇವರು ಕಳುಹಿಸಿದ ಅರ್ಜಿಗಳಿಗೆ ಮನ್ನಣೆ ಕೊಡಬೇಕೆಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅದಕ್ಕೆ ಮನ್ನಣೆ ಕೊಟ್ಟರೇ ಇಲ್ಲವೇ ಎಂದು ತಿಳಿದುಕೊಳ್ಳುತ್ತಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿದುಕೊಳ್ಳುತ್ತಿದ್ದೇವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅನೇಕ ವರ್ಷಗಳ ಹಿಂದೆ ಹೆಸರುಗಳು ರಿಜಿಸ್ಟರಾಗಿದ್ದರೂ ಇನ್ನೂ ಅವರಿಗೆ ಕೆಲಸವೇ ಸಿಕ್ಕದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು, ಅದೂ ಸಾಧ್ಯ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅರ್ಜಿ ಹಾಕಿದವರಲ್ಲಿ ಯಾವಯಾವ ಚೆಕ್ನಿಕಲ್ ಜನರು ಯಾವ ಯಾವ ಕೆಲಸಕ್ಕೆ ಲಾಯಕ್ಕು ಎಂದು ಏಂಗಡಿಸಿ ಕೆಲಸ ಕೊಡುವ ವ್ಯವಸ್ಥೆಯಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಚೆಕ್ನಿಕಲ್ ಜನರು ಯಾರುಯಾರೆಂಬುದನ್ನು ತಿಳಿದು ಕೆಲಸವನ್ನು ಕೊಡಬೇಕೆಂಬುದನ್ನು ಕೇಂದ್ರ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ತಕ್ಕ ಏರ್ಪಾಡು ಮಾಡುತ್ತಿದ್ದಾರೆ.

Sri Mulka GOVINDA REDDY.—Are the Government aware that this does not indicate the extent of unemployment problem in the State ?

Sri A. G. RAMACHANDRA RAO.—It cannot be. It is one of the factors to indicate the extent of unemployment.

Sri Mulka GOVINDA REDDY.—The number of persons seeking employment in Government and other services is indicated here.

Sri A. G. RAMACHANDRA RAO.—Yes, the number of candidates registered and number of applicants placed in employment have been furnished, but these figures are final and comprehensive.

Sri Mulka GOVINDA REDDY.—What is the object of distributing applications to the Employment Exchange and also the Public Service Commission ?

Sri A. G. RAMACHANDRA RAO.—I want notice for that.

ಶ್ರೀ ಪಿ. ಆರ್. ರಾಮಯ್ಯ.—ನಿರುದ್ಯೋಗಿಗಳಿಗೆ ಕೆಲಸವನ್ನೊದಗಿಸುವುದಕ್ಕಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ನು ಮಾಡಿದ್ದೀರಲ್ಲಾ, ಅವರೇನಾದರೂ vacancyಗಳ ಪಟ್ಟಿ ಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ತಮ್ಮಲ್ಲಿ ಇಷ್ಟು ಖಾಲಿ ಸ್ಥಾನಗಳಿವೆಯೆಂದು ಹೇಳಿ ನಾನಾ concernಗಳವರು ಎಕ್ಸ್ಚೇಂಜಿಗೆ ತಿಳಿಸುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ಕಡ್ಡಾಯವಾಗಿ ಪ್ರತಿಯೊಂದು concernನಿನವರು ಎಕ್ಸ್ಚೇಂಜಿಗೆ ಸಮಾಚಾರ ಕಳುಹಿಸಿಕೊಡಬೇಕೆಂದು ಕಾಯಿದೆಯಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಡ್ಡಾಯವಾಗಿ ರಿಜಿಸ್ಟ್ರೇಷ್ ಆಗಬೇಕೆಂದು ಹೇಳಿ ಕಾನೂನು ಮಾಡುವುದೂ ಪರ್ಯಾಲೋಚನೆಯಲ್ಲಿದೆ.

ಶ್ರೀ ಪಿ. ಆರ್. ರಾಮಯ್ಯ.—ಯಾವಾಗ ಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಂದ್ರ ಸರ್ಕಾರ ಅದನ್ನು ಮಾಡಬೇಕು; ಅವರ ಪರಿಶೀಲನೆಯಲ್ಲಿದೆ.

Sri M. PALANIYAPPAN.—Can you let me know the number of Mysore Government Officers serving in this Department, and the expenditure to be met?

Sri A. G. RAMACHANDRA RAO.—I have furnished in the answer that 60 per cent of this expenditure is borne by the Central Government and 40 per cent by the State Government. Sri Rachiah, one of the Officers of the Mysore Government, is incharge of the Exchange Department.

Sri M. PALANIYAPPAN.—The number of appointments made by the Mysore Government or by the Central Government?

Sri A. G. RAMACHANDRA RAO.—Regarding Government employment, it is the Public Service Commission that does it and the Employment Exchange does not come into the picture.

Sri M. PALANIYAPPAN.—Will the Public Service Commission be consulted by the Employment Exchange for appointing to the Mysore Government services?

Sri A. G. RAMACHANDRA RAO.—It is not that I am aware of.

Sri M. PALANIYAPPAN.—Is it not a criminal waste of 40 per cent of the money if the services are not utilised by the Government?

Sri A. G. RAMACHANDRA RAO.—No.

Sri M. PALANIYAPPAN.—I want to bring to the notice of the Speaker that there is a small printing mistake in answers (*c*) and (*d*).

ಶ್ರೀ ಎಸ್. ಗೋಪಾಲಗೌಡ.—ಇಲ್ಲಿಗೆ ಹಾಕಿದ ಅಪ್ಲಿಕೇಷ್ಗಳನ್ನು ಮೂರು ತಿಂಗಳಿಗೊಮ್ಮೆ renew ಮಾಡಬೇಕೆಂದಿದೆಯಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆಯೆಂದು ಕಾಣುತ್ತದೆ; ಸರಿಯಾಗಿ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೀಗಿರುವುದಕ್ಕೆ ಬದಲಾಗಿ ಖಾಯಮ್ಮಾಗಿ ಏಕೆ ರಿಜಿಸ್ಟರ್ ಮಾಡ ಕೂಡದು?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಬಹಳ ಕಷ್ಟವಾಗುತ್ತದೆ. ಅಲ್ಲಿರತಕ್ಕ ದೊಡ್ಡ ಅರ್ಜಿಗಳ ಕಂತೆಯಲ್ಲಿ ಯಾವುದನ್ನೂ ಹುಡುಕುವುದು ಕಷ್ಟ.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ರಿಜಿಸ್ಟರಾಗಿರತಕ್ಕವರಿಗೇನಾದರೂ priority ಮೇಲೆ ಕೆಲಸ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅರ್ಜಿಗಳನ್ನು ಸಂಬಂಧಪಟ್ಟ ಆಫೀಸುಗಳಿಗೆ ಕಳುಹಿಸಿ ಕೊಡಬೇಕಾದರೆ, ಬಹಳ ದಿವಸಗಳಿಂದ ಕೆಲಸ ಸಿಕ್ಕದೆ ಇರುವವರಿಗೇ ಮೊದಲು ಕಳುಹಿಸಿಕೊಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಎಂಪ್ಲಾಯ್ಮೆಂಟ್ ಎಕ್ಸ್ಚೇಂಜಿನಲ್ಲಿ ರಿಜಿಸ್ಟರ್ ಮಾಡಿದ್ದರೂ ಕೆಲಸ ಸಿಕ್ಕುವವರೆಗೂ ಏನಾದರೂ ಪರಿಹಾರ ರೂಪದಲ್ಲಿ ಹಣ ಕೊಡುವುದನ್ನು ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಿನ್ನೂ ಆ ಕಾನೂನು ಪರಿಶೀಲನೆಯಲ್ಲಿಲ್ಲ.

ಶ್ರೀ ಆರ್. ಅನಂತರಾಮ್.—ಎಂಪ್ಲಾಯ್ಮೆಂಟ್ ಎಕ್ಸ್ಚೇಂಜಿನವರು ಶಿಫಾರಸು ಮಾಡಿದಂಥ ಉಮೇದುವಾರರನ್ನು ಖಾಸಗೀ ಸಂಸ್ಥೆಗಳವರು ಬೇಕಿಲ್ಲವೆಂದು ಹೇಳಿಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಅನಂತರಾಮ್.—ಅವರು ಕಳುಹಿಸಿದ ಉಮೇದುವಾರರುಗಳನ್ನು ತೆಗೆದುಕೊಳ್ಳಲೇಬೇಕೆಂದು ನಿರ್ಬಂಧ ಮಾಡುವುದು ಸೂಕ್ತವಲ್ಲವೆ ಮತ್ತು ಯುಕ್ತವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಯು. ಎಂ. ಮಾದಪ್ಪ.—1946ರಿಂದ 1955ನೆಯ ಇಸವಿಯವರೆಗೂ ಸಾಮಾನ್ಯವಾಗಿ ರಿನ್ಯೂಯಲ್ ಆಗುತ್ತಿರುವ ಅರ್ಜಿಗಳ ಒಟ್ಟು ಸಂಖ್ಯೆಯನ್ನು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

Sri H. C. LINGA REDDY.—What is the necessity for this Employment Exchange when there is Public Service Commission?

Sri A. G. RAMACHANDRA RAO.—As I have already snbmitted, they perform different functions in respect of different institutions.

Sri H. C. LINGA REDDY.—Does not the Public Service Commission enlist the names of applicants?

Sri A. G. RAMACHANDRA RAO.—It does not enlist in respect of industrial concerns and other institutions.